ಬರುತ್ತಾ?.... ಅವನು ಜೇಬಿನಿಂದ ಮೊಬೈಲ್ ಫೋನ್ ತೆಗೆಯುವುದಕ್ಕೂ ನಾನು ಪರ್ಸ್‌ನಿಂದ ಪೇಪರ್ ಪೆನ್ನು ತೆಗೆಯುವುದಕ್ಕೂ ಸರಿ ಹೋಯಿತು.

ಅವನ ಮುಖ ನಗುವಿನಲ್ಲಿ ಅರಳಿದಾಗ ನನಗೆ ರೇಗಿತು, ಪೆಚ್ಚೆನಿಸಿತು.

ಒರ್ಕೋಳಿ... ನನ್ನ ಬದಲಾದ ಮುಖಭಾವ ಅವನ ನಗುವನ್ನು ಅಳಿಸಿ ಹಾಕಿತು.

ಇಷ್ಟೊಂದು ಸೂಕ್ಷ್ಮವೇ ಈ ಗಂಡಸು...! ಮುಖಭಾವದ ಬದಲಾವಣೆಯಲ್ಲಿ ಮನಸ್ಸು ಅರ್ಥ ಮಾಡಿಕೊಳ್ಳುವ ಶಕ್ತಿ ಗಂಡಸರಿಗೂ ಇರುತ್ತದೆಯೇ....

ಆದರೆ ಫೋನ್ ಮಾಡೋಕ್ಕೆ ಮುಂಚೆ ಟೈಂ ಚೆಕ್ ಮಾಡಿ... ಪ್ರೀತಿ ಯುರೋಪ್ ಟ್ರಿಪ್‌ಗೆ ಹೊರಟಿದ್ಲು... ಇರಿ... ಅವಳಿಗೆ ಈಗಲೇ ಫೋನ್ ಮಾಡಿ ವಿಚಾರಿಸ್ತೀನಿ.. ತೊಗೊಂಡ್ರೆ ಈಗಲೇ ಮಾತಾಡಿಬಿಡಿ.. ಅವನು ಅವನ ಮೊಬೈಲನ್ನು ನನ್ನತ್ತ ಚಾಚಿದಾಗ ನನ್ನ ಕೈಗಳನ್ನು ಹಿಂದಕ್ಕೆ ತೆಗೆದುಕೊಂಡೆ.

ಇಲ್ಲ... ಪರ್ವಾಗಿಲ್ಲ... ನಾನು ಆಮೇಲೆ ಮಾಡ್ತೀನಿ...

ಯಾಕ್ರೀ? ಏನು ಪ್ರಾಬ್ಲಂ?.... ನನ್ನ ಮೊಬೈಲ್ ಫೋನ್ ಮುಟ್ಟಿದ್ರೆ ನಿಮ್ಗೆ ಏನೂ ಆಗೊಲ್ಲ... ಓ .. ಹಲೋ.. ಪ್ರೀತಿ... ಹೇಗಿದ್ಯ?... ಓಕೆ ಎವರಿಥಿಂಗ್ ಈಸ್ ಫೈನ್.... ಇಲ್ಲ ನಿನ್ನ ಫ್ರೆಂಡ್ ಮಾತಾಡ್ತೀನಿ ಅಂದ್ರು ಅದಕ್ಕೆ ಡಯಲ್ ಮಾಡಿದೆ... ಈಗ ಬೇಡ ಅಂತಿದ್ದಾರೆ... ನಿನ್ನ ಮೇಲೆ ಕೋಪವೋ... ನನ್ನ ಮೇಲೆ ಬೇಸರವೋ.. ಗೊತ್ತಿಲ್ಲ...

ಸ್ಪೀಕರ್ ಆನ್ ಮಾಡಿದ್ದರಿಂದ ಅತ್ತ ಕಡೆ ಪ್ರೀತಿ ನಕ್ಕಿದ್ದು ಕೇಳಿಸಿತು..

ವಿಶ್ವಾಸ್! ಅವಳ್ನ ಗೋಳು ಹೊಯ್ದುಕೊಳ್ಳಬೇಡ!.. ಶಿ ಈಸ್ ವೆರಿ ಸೆನ್ಸಿಟಿವ್... ಪ್ರೀತಿಯ ದನಿ ಸ್ಪಷ್ಟವಾಗಿ ಕೇಳಿದಾಗ ಕೈ ಮುಂದೆ ಚಾಚಿದೆ. ಮೊಬೈಲನ್ನು ತನ್ನ ಶರ್ಟ್‌ನ ಸ್ಲೀವ್‌ಗೆ ರಭಸವಾಗಿ ಒರೆಸಿ, ನಕ್ಕು ನನ್ನ ಕೈಯಲ್ಲಿ ಇರಿಸಿದ ವಿಶ್ವಾಸ್..

ಹಲೋ ಪ್ರೀತಿ.. ಏನಿಲ್ಲ.... ಹೇಗೆ ಮಾತಾಡುವುದು ಎದುರಿಗೆ ಇವನು. ಸುತ್ತಾ ಮುತ್ತಾ ಬೊಂಬೆ ಮಾಡುವುದನ್ನು ಕಲಿಯಲು ಬರುತ್ತಿರುವ, ನನಗೆ ನಮಸ್ಕಾರ ಹೇಳುತ್ತಾ ಮುಂದೆ ಹೋಗುತ್ತಿರುವ ಊರಿನ ಹೆಂಗಸರು....

ಏನೇ?... ನಮ್ಮ ಹುಡುಗನ್ನ ಕ್ಲೀನ್ ಬೌಲ್ಡ್ ಮಾಡಿಬಿಟ್ಟಿದ್ಯ..... ಪಾಪ ವಿಶ್ವಾಸ್...

ಹುಶ್ಶ್... ಪ್ರೀತಿ.... ಸ್ಪೀಕರ್ ಆನ್ ಆಗಿದ್ದರಿಂದ ಪ್ರೀತಿಯ ದನಿ.. ಎಲ್ಲರಿಗೂ ಕೇಳಿಸಿ... ನನ್ನ ಮುಜುಗರ ಹೆಚ್ಚಿ..... ಮೊಬೈಲನ್ನು ನನ್ನಿಂದ ದೂರ ಹಿಡಿದು ಅದರತ್ತ ನೋಡಿದೆ.. ಈ ಸ್ಪೀಕರ್ ಆಫ್ ಮಾಡೋದು ಹೇಗೆ?...

ಮುಂದೆ ದೂರ ಹೋಗುತ್ತಿದ್ದ ವಿಶ್ವಾಸ್ ನನ್ನ ಬಳಿಗೆ ಹಿಂತಿರುಗಿದ.. ಮುಖದ ಮೇಲೆ ತುಂಟ ನಗು... ನನ್ನ ಕೆನ್ನೆಗಳು ಕೆಂಪೇರಿದ ಅರಿವು ಅವನ ಕಂಗಳಲ್ಲಿ ಗೋಚರಿಸಿತು.

ಏನಾಯ್ತೇ?...

ಬಳಿ ಬಂದ ವಿಶ್ವಾಸ್‌ಗೆ ಅವನ ಮೊಬೈಲಿತ್ತು ಸುಮ್ಮನೆ ನಿಂತೆ.

ಇರು ಪ್ರೀತಿ... ಸ್ಪೀಕರ್ ಆಫ್ ಮಾಡಿ ಕೊಡ್ತೀನಿ ನಿನ್ನ ಫ್ರೆಂಡ್‌ಗೆ... ಇಲ್ಲಿ ಇರೋರಿಗೆಲ್ಲಾ ನಿನ್ನ ಮಾತು ಕೇಳಿಸ್ತಿದೆ... ಶಿ ಈಸ್ ಎ ಕ್ವೀನ್ ಹಿಯರ್.. ಮೊಬೈಲ್ ನನ್ನ ಕೈಯಲ್ಲಿ ಇರಿಸಿ ದೂರ ನಡೆದ ವಿಶ್ವಾಸ್ ಹಲೋ.. ಪ್ರೀತಿ... ಬೆಂಗಳೂರಿನಲ್ಲಿ ಇದ್ಯ.. ಮೆಲ್ಲನೆ ಕೇಳಿದೆ.

ಹೂ... ನಾಳೆ ರಾತ್ರಿ ಯೂರೋಪ್ ಟೂರ್‌ಗೆ ಹೊರಡೋದು... ಯಾಕೆ?...

ನಾನು.. ನಾನು ನಿನ್ನ ಜೊತೆ ಮಾತಾಡಬೇಕಿತ್ತು...

ಹೇಳು...

ಏನು ಹೇಳುವುದು? ಹೇಗೆ ಹೇಳುವುದು?.. ಶುರು ಮಾಡುವುದು ಎಲ್ಲಿಂದ?.... ಇಲ್ಲಿ.. ಈ ಶಾಲೆಯ ಆವರಣದಲ್ಲಿ... ಇಷ್ಟು ಜನರ ಮುಂದೆ ನಾನು ಎಲ್ಲಾ ಬಿಟ್ಟು ಬರ್ತೀನಿ.. ನಂಗೆ ಆಶ್ರಯ ಕೊಡು.. ಎಂದು ಕೇಳುವುದೇ....

ನೀನು ಯೂರೋಪ್‌ಗೆ ಹೋಗಿ ಬಾ.. ಆಮೇಲೆ ಫೋನ್ ಮಾಡ್ತೀನಿ..

ಸರಿ... ಹೇ ಲಿಸನ್... ಆರ್ಟಿಫಿಷಿಯಲ್ ಒಡವೆಗಳನ್ನು ಮಾಡಲು ಹೇಳಿ ಕೊಡೋಂತವರೊಬ್ಬರು ಸಿಕ್ಕಿದ್ದಾರೆ ನಂಗೆ... ತರಾವರಿ ಮಣಿ, ಗುಂಡು, ತಂತಿಗಳಿಂದ ಒಡವೆ ಮಾಡ್ತಾರೆ... ತುಂಬಾನೆ ಚೆನ್ನಾಗಿರುತ್ತೆ... ಆಕೆ ಒಂದು ಎಕ್ಸಿಬಿಷನ್ ಮಾಡಿದ್ರೆ.. ಒಂದು ಲಕ್ಷದವರೆಗೂ ಸಂಪಾದಿಸ್ತಾರಂತೆ ನೆಕ್ಸ್ಟ್ ಅವರನ್ನ ಕಳಿಸಿಕೊಡ್ತೀನಿ..

ಸರಿ...

ಯಾಕೆ ದನಿ ಡಲ್ಲಾ ಗಿದೆ?... ಏನಿ ಪ್ರಾಬ್ಲಂ?...

ಏನಿಲ್ಲ... ಯೂರೋಪ್ ಟ್ರಿಪ್ ಎನ್ಜಾಯ್ ಮಾಡಿಕೊಂಡು ಬಾ... ಆಮೇಲೆ ಮಾತಾಡೋಣ... ಬೈ...

ಡಿಸ್‌ಕನೆಕ್ಟ್ ಮಾಡಲು ಯಾವ ಬಟನ್ ಒತ್ತಬೇಕು?...

ಅದೇ ಡಿಸ್‌ಕನೆಕ್ಟ್ ಆಗಿರುತ್ತೆ ಬಿಡಿ ದನಿ ಕೇಳಿ ತಲೆ ಎತ್ತಿದೆ ಎದುರಿಗೆ ವಿಶ್ವಾಸ್.

ಅವನ ಕೈಗೆ ಮೊಬೈಲಿತ್ತು ತಿರುಗಿದೆ.

ಬರ್ತೀನಿ...

ಏನು ಪ್ರಾಬ್ಲಂ?... ಅಷ್ಟು ಖುಷಿಯಾಗಿ, ಪ್ರಪಂಚದಲ್ಲಿ ಕಷ್ಟವೇ ಇಲ್ಲವೇನೋ ಎಂಬಂತೆ ಮಾತನಾಡುವವನ ದನಿಯಲ್ಲಿ ಇಷ್ಟೊಂದು ಆರ್ದ್ರತೆ.

ಏನಿಲ್ಲ.. ದನಿ ಗದ್ಗದಿತವಾಯಿತು. ಅವನ ಮುಂದೆ ನಿಂತು, ಅವನ ದನಿಯಲ್ಲಿ ಇನ್ನೊಂದು ಮಾತು ಕೇಳಿದರೆ, ಅವನ ಕಂಗಳನ್ನು ನಿಟ್ಟಿಸಿದರೆ... ದುಃಖವುಕ್ಕಿ ಇಲ್ಲಿ ಎಲ್ಲರ ಮುಂದೆ ಅಳಬಹುದು... ಬೇಡ ಇಲ್ಲಿ ನಿಲ್ಲುವುದು ಬೇಡ... ಹಿಂತಿರುಗಿ ನೋಡುವುದೂ ಬೇಡ..... ಸರಸರನೆ ನಡೆದು ಕಾರು ಹತ್ತಿ ಕುಳಿತೆ...

ಮನೆಗಾ ಅಮ್ಮ...

ಹೂಂ....

ಕಂಗಳನ್ನು ಭದ್ರವಾಗಿ ಮುಚ್ಚಿಕೊಂಡು ಹೊರ ಬಂದ ಕಂಬನಿಯನ್ನು ಸೆರಗಿನಿಂದ ಒರಸಿಕೊಂಡೆ.

ಮನೆ.... ನನ್ನದಲ್ಲದ ಮನೆ....ನನ್ನವನಲ್ಲದ ಗಂಡ... ನನ್ನ ಅವಶ್ಯಕತೆಯಿಲ್ಲದ ಮಕ್ಕಳು... ನಾನೆಂದರೆ ಪ್ರೀತಿಯಿರದ ಅತ್ತೆ. ಮಾವ...

ವಿವೇಕ ಬೆಂಗಳೂರಿಗೆ ಹೋಗಿದ್ದಾನೆ... ನಿಂಗೆ ಹೇಳಲು ಹೇಳಿದ... ಮನೆಗೆ ಬರುತ್ತಿದ್ದಂತೆ ಅತ್ತೆ ಹೇಳಿದರು.

ಹೂಂ...

ನಾಡಿದ್ದು ಹೋಮ ಇಟ್ಟುಕೊಂಡಿದ್ದೇನೆ ಮನೆಯಲ್ಲಿ ನಿಂಗೆ ಟೈಂ ಅಲ್ಲಾ ತಾನೇ..

ಗೊತ್ತಿಲ್ಲ...

ಏನು ಗೊತ್ತಿಲ್ಲ ಅಂದ್ರೆ? ತಿಂಗಳಿಗೊಮ್ಮೆ ಆಗುವ ಮುಟ್ಟಿನ ದಿನ ಗೊತ್ತಿಲ್ಲ ಅಂದರೆ...? ಇದೆಲ್ಲಾ ಜವಾಬ್ದಾರಿ ತೆಗೆದುಕೊಂಡು ನೀನು ಮಾಡಬೇಕು. ಅತ್ತೆ ರೇಗಿದಾಗ ನನಗೂ ರೇಗಿತು ಆದರೆ ಹೇಳುವುದು ಏನು?... ಫೋನ್ ರಿಂಗಾಗತೊಡಗಿತು...

ಫೋನಾದರೂ ರಿಸೀವ್ ಮಾಡು... ಬೆನ್ನು ತಿರುಗಿಸಿ ಒಳಗೆ ನಡೆದರು ಅತ್ತೆ.

ಮೊದಲಿನಿಂದಲೂ ಅಷ್ಟೇ, ರೇಗುತ್ತದೆ ನನಗೂ... ಆದರೆ ತಟ್ಟನೆ ಹಿಂತಿರುಗಿಸಿ ಅನ್ನಲು ತೋಚುವುದಿಲ್ಲ.... ಹೊಳೆಯುವ ವೇಳೆಗೆ ಅಂದವರು ಬೆನ್ನು ತಿರುಗಿಸಿ ಹೋಗಿಯಾಗಿರುತ್ತದೆ.

ಹಲೋ.... ರಿಸೀವರ್ ಕೈಗೆತ್ತಿಕೊಂಡು ಮೆಲ್ಲನೆ ಉತ್ತರಿಸಿದೆ.

ಹಾಂ.. ನಾನು.... ಎಷ್ಟೊತ್ತು ಫೋನ್ ತೊಗೊಳೋಕ್ಕೆ..

ಹೇಳಿ..

ಅಪ್ಪಂಗೆ ಕೊಡು...

ಅವರಿಲ್ಲ..

ಅಮ್ಮನಿಗೆ ಹೇಳು.. ನಾಡಿದ್ದು ಹೋಮಕ್ಕೆ ಮುಖ್ಯಮಂತ್ರಿಗಳು ಬರ್ತಾರೆ... ತುಂಬಾ ಜನ ಸೇರ್ಸೋದು ಬೇಡ.. ಅವರಿಗೆ ಇಷ್ಟ ಆಗೋಲ್ಲ... ಅಪ್ಪ ಬಂದ ಮೇಲೆ ನಂಗೆ ಫೋನ್ ಮಾಡೋಕೆ ಹೇಳು...

(ಸಶೇಷ)

## ಸ್ವಾತಂತ್ರ್ಯ

ರೆಕ್ಕೆ ಬರುವ ಮುನ್ನವೇ
ಹಾರತೊಡಗಿತು
ಹಕ್ಕಿಯ ಸ್ವಾತಂತ್ರ್ಯವು!

—ವಿ. ಪುಗಳೇಂದಿ



ಶಿಲ್ಪಾ